# KALPAVRUKSHA MODEL SCHOOL

**Holiday Assignment**

| | | |
|---|---|---|
| **Name:** | **Subject: ಕನ್ನಡ** | **Class: X (2Language Kannada)** |
| **Topic : ಬರವಣಿಗೆ ಕೌಶಲ & ವ್ಯಾಕರಣ** | **May 2021** | **Ref. No.KMS/21-22/assignment/Kan/ X/001** |

**ಪ್ರಶ್ನೆ. ೦೧ – ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಕುಮಾರವ್ಯಾಸ (ಕ್ರಿ.ಶ. ೧೩೫೦–೧೪೦೦) ಅತ್ಯುನ್ನತ ಕವಿಗಳಲ್ಲಿ ಒಬ್ಬ. ದಿಗ್ಗಜರಲ್ಲಿ ಒಬ್ಬ ಎಂದರೆ ತಪ್ಪಾಗಲಾರದು. ಕುಮಾರವ್ಯಾಸನ ಮೂಲ ಹೆಸರು ನಾರಾಯಣಪ್ಪ. "ಗದುಗಿನ ನಾರಾಯಣಪ್ಪ" ಎಂದು ಸಾಮಾನ್ಯವಾಗಿ ಕುಮಾರವ್ಯಾಸನನ್ನು ಗುರುತಿಸಲಾಗುತ್ತದೆ. ಈತನ ಕಾವ್ಯ ನಾಮ ಕುಮಾರವ್ಯಾಸ. ವ್ಯಾಸ ಮಹಾಕವಿಯ ಸಂಸ್ಕೃತ ಅತ್ಯದ್ಭುತ ಕನ್ನಡ ರೂಪವನ್ನು ರಚಿಸಿದ್ದರಿಂದ, ವ್ಯಾಸ ಮಹಾಕವಿಯ ಮಾನಸಪುತ್ರ ತಾನೆನ್ನುವ ವಿನೀತ ಭಾವದಿಂದ ನಾರಣಪ್ಪ ಕುಮಾರ ವ್ಯಾಸನಾಗಿದ್ದಾನೆ. ಈ ಹೆಸರು ಕುಮಾರವ್ಯಾಸನಿಗೆ ಅನ್ವರ್ಥವಾಗಿದೆ. ಕುಮಾರವ್ಯಾಸ ಗದುಗಿನ ವೀರನಾರಾಯಣ ದೇಗುಲದಲ್ಲಿನ ಕಂಬದ ಅಡಿಯಲ್ಲೇ ಗದುಗಿನ ಭಾರತವನ್ನು ರಚಿಸಿ ಓದುತ್ತಿದ್ದ ಎಂಬ ಪ್ರತೀತಿ ಸಹ ಇದೆ. ಕುಮಾರವ್ಯಾಸನ ಅತಿ ಪ್ರಸಿದ್ಧ ಕೃತಿ ಇದಕ್ಕೆ ಗದುಗಿನ ಭಾರತ, ಕನ್ನಡ ಭಾರತಎಂದೂ ಹೆಸರು. ಮಹಾಕವಿ ವ್ಯಾಸರ ಸಂಸ್ಕೃತ ಮಹಾಭಾರತದ ಕನ್ನಡಾನುವಾದ ಎನ್ನಬಹುದು. ಆದರೆ ಕೇವಲ ಅನುವಾದವಾಗಿ ಉಳಿಸದೆ ಕುಮಾರವ್ಯಾಸ ತನ್ನ ಕಾವ್ಯಸಾಮರ್ಥ್ಯವನ್ನು ಈ ಕೃತಿಯಲ್ಲಿ ಸಂಪೂರ್ಣವಾಗಿ ಧಾರೆಯೆರೆದಿದ್ದಾನೆ. ಮೇರುಕೃತಿಯಾಗಿ ಪರಿಗಣಿತವಾಗಿರುವ ಕನ್ನಡ ಭಾರತ, ಸಂಸ್ಕೃತ ಮಹಾಭಾರತದ ಮೊದಲ ಹತ್ತು ಪರ್ವಗಳು, ೧೪೭ ಸಂಧಿ, ೭೯೭೧ ಪದ್ಯಗಳನ್ನು ಒಳಗೊಂಡಿದೆ. 'ಕುಮಾರವ್ಯಾಸ ಭಾರತ'ದ ಭಾಷೆ ನಡುಗನ್ನಡ. ಸಂಪೂರ್ಣ ಕಾವ್ಯ ಛಂದಸ್ಸಿನಲ್ಲಿ ರಚಿತವಾಗಿದ್ದು ಕುಮಾರವ್ಯಾಸನ ಕಾವ್ಯ ಪ್ರತಿಭೆ ಓದುಗರನ್ನು ದಂಗುಬಡಿಸುತ್ತದೆ. ಅವನ ಕಾವ್ಯಪ್ರತಿಭೆ ಪೂರ್ಣಶಕ್ತಿಯಲ್ಲಿ ಹೊರಹೊಮ್ಮುವುದು ಅವನ ಕುಮಾರವ್ಯಾಸನ ರೂಪಕಗಳ ವೈವಿಧ್ಯತೆ ಮತ್ತು ಆಳ ಅಪಾರವಾದದ್ದು. ಇದೇ ಕಾರಣಕ್ಕಾಗಿ ಕುಮಾರವ್ಯಾಸನ ಹೆಸರು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂದೇ ಖ್ಯಾತಿ ಪಡೆದಿದೆ. ರೂಪಕಗಳೊಂದಿಗೆ ಕುಮಾರವ್ಯಾಸನ ಇನ್ನೊಂದು ಸಾಮರ್ಥ್ಯ ಮಾನವ ಪ್ರಕೃತಿಯ ವರ್ಣನೆ. ಕುಮಾರವ್ಯಾಸನ ಪಾತ್ರಗಳು ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟ. ಅವನ ಎಲ್ಲ ಪಾತ್ರಗಳು ಅವರವರದೇ ರೀತಿಯಲ್ಲಿ ಮಾತನಾಡುತ್ತಾರೆ, ಬೈಯುತ್ತಾರೆ, ನಗುತ್ತಾರೆ, ಹಾಗೂ ಅಳುತ್ತಾರೆ ಸಹ. ಕುಮಾರವ್ಯಾಸ ಅಷ್ಟೇ ಆಳವಾದ ದೈವಭಕ್ತ ಸಹ. ಶ್ರೀ ವರ್ಣನೆ ಅವನ ಕಾವ್ಯರಚನೆಯ ಮೂಲೋದ್ದೇಶಗಳಲ್ಲಿ ಒಂದು. ("ತಿಳಿಯ ಹೇಳುವೆ ಕೃಷ್ಣ ಕಥೆಯನು") ಅವನ ಮಹಾಭಾರತ ಕಥೆ ಕೃಷ್ಣನ ಸುತ್ತಲೂ ಸುತ್ತುತ್ತದೆ. ಕುಮಾರವ್ಯಾಸ ಕೃಷ್ಣನ ಭಕ್ತ. ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಹತ್ತರ (ಗದಾಪರ್ವ) ವರೆಗೆ. ಬರೆದು ದುರ್ಯೋಧನನ ಅವಸಾನದ ನಂತರ, ಕುಮಾರವ್ಯಾಸನು ಮುಂದೆ ಸಂಕ್ಷಿಪ್ತವಾಗಿ, ಶ್ರೀಕೃಷ್ಣನು ಧರ್ಮರಾಜನಿಗೆ ಪಟ್ಟಾಭಿಷೇಕವನ್ನು ಮಾಡಿಸಿ ದ್ವಾರಕೆಗೆ ಹಿಂದಿರುಗುವವರೆಗೆ ಬರೆದಿದ್ದಾನೆ.

ಪ್ರಶ್ನೆಗಳು:

೧. ನಾರಾಣಪ್ಪನಿಗೆ ಕುಮಾರವ್ಯಾಸ ಹೆಸರು ಬರಲು ಕಾರಣವೇನು?
೨. ಕುಮಾರವ್ಯಾಸನಿಗೆ ಯಾವ ಪ್ರತೀತಿ ಇದೆ?
೩. ಕುಮಾರವ್ಯಾಸನ ಕಾವ್ಯಶಕ್ತಿಯನ್ನು ವಿವರಿಸಿ.
೪. ಕುಮಾರವ್ಯಾಸನ ಕೃತಿ ಮತ್ತು ಸಂಕ್ಷಿಪ್ತವಾಗಿ ಪರಿಚಯ ಬರೆಯಿರಿ.

**ಪ್ರಶ್ನೆ. ೨. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಸುಹೋತ್ರನು ಕುರುರಾಜ. ಮಹರ್ಷಿಗಳನ್ನು ದರ್ಶಿಸಿ ಆಶೀರ್ವಾದ ಪಡೆದು ಹಿಂತಿರುಗುತ್ತಿದ್ದನು. ಉಶೀನರ ದೇಶದ ರಾಜನಾದ ಶಿಬಿ ಎದುರಾದನು. ಇಬ್ಬರೂ ಆಪ್ತಮಿತ್ರರು ಪರಸ್ಪರ ಆದರಿಸಿಕೊಂಡರು. ರಾಜರಿಬ್ಬರೂ ಸದ್ಗುಣಗಳ ಗಣಿಗಳು. ಪದವಿ ಇಬ್ಬರದೂ ಸಮಾನ. ಇಬ್ಬರೂ ಯಾವುದರಲ್ಲಿಯೂ ಮತ್ತೊಬ್ಬರಿಗೆ ಕಡಿಮೆಯಿಲ್ಲ. ದಾರಿಬಿಡದೆ ಸುಮ್ಮನೆ ನಿಂತರು.

ಲೋಕದಲ್ಲಿ ಸಾಮಾನ್ಯವಾಗಿ ಕಿರಿಯನು ಹಿರಿಯನಿಗೆ ವಿನೀತನಾಗಿರುವುದು ರೂಢಿ. ಕಿರಿಯನು ಹಿರಿಯನಿಗೆ ಮೊದಲು ನಮಿಸುವನು, ಗೌರವಿಸುವನು, ದಾರಿಮಾಡಿಕೊಡುವನು ಇತ್ಯಾದಿ. ಆದರಿಲ್ಲಿ ಸಮಾನರಾದ ಇಬ್ಬರ ನಡುವೆ ಯಾರು ಯಾರಿಗೆ ದಾರಿ ಬಿಡಬೇಕು? ಸರಿಯಾದ ಸಮಯಕ್ಕೆ ನಾರದರ ಆಗಮನ. "ಹೀಗೇಕೆ ಅಡ್ಡಗಟ್ಟಿ ನಿಂತಿರುವಿರಿ?" ಎಂದು ಪ್ರಶ್ನಿಸಿದರು. ಇಬ್ಬರೂ, "ಪೂಜ್ಯರೆ, ನಮ್ಮಲ್ಲಿ ಯಾರೂ ಯಾರಿಗೂ ದಾರಿ ಬಿಡುವ ಹಾಗಿಲ್ಲ. ಇಬ್ಬರೂ ಆತ್ಮೀಯರು. ಇಬ್ಬರೂ ಸಮಾನರಾದ್ದರಿಂದ ಈ ಗೊಂದಲ" ಎಂದರು. ನಾರದರು ಗೊಂದಲವನ್ನು ಬಿಡಿಸಿದರು. "ಕ್ರೂರ ಸ್ವಭಾವವುಳ್ಳವನು ಎಲ್ಲದರಲ್ಲಿಯೂ ಕ್ರೂರಿಯಾಗಿಯೇ ಇರುತ್ತಾನೆ. ಮೃದು ಸ್ವಭಾವದವನೂ ಹಾಗೆಯೇ. ಯೋಗ್ಯನು ಎಲ್ಲದರಲ್ಲಿಯೂ ಯೋಗ್ಯನೇ. ಅಯೋಗ್ಯನೂ ಹಾಗೆಯೇ. ಲೋಕವು ಹೀಗಿರುವಾಗ, ಯೋಗ್ಯನು ಯೋಗ್ಯನಲ್ಲಿಯೂ ಯೋಗ್ಯನಾಗಿಯೇ ಇರುವನಲ್ಲವೇ? ಉಪಕಾರ ಪಡೆದ ಸತ್ಪುರುಷನು ಅದರ ನೂರುಪಟ್ಟು ಉಪಕರಿಸುವನು".

"ಲೋಭಿಯನ್ನು ದಾನದಿಂದಲೂ, ಸುಳ್ಳನನ್ನು ಸತ್ಯದಿಂದಲೂ, ಕ್ರೂರಿಯನ್ನು ತಾಳ್ಮೆಯಿಂದಲೂ, ದುಷ್ಟನನ್ನು ಸಾಧುತ್ವದಿಂದಲೂ ಗೆಲ್ಲಬೇಕು. ನೀವಿಬ್ಬರೂ ಉದಾರಿಗಳು, ಸಮಾನಗುಣವುಳ್ಳವರು. ಒಬ್ಬನು ಇನ್ನೊಬ್ಬನಿಗಿಂತಲೂ ಸಾಧುವಾಗಬೇಕಾದರೆ ನಿಮ್ಮಲ್ಲಿ ಯಾರಾದರೊಬ್ಬರು ದಾರಿಬಿಡಲೇಬೇಕು. ಆಗಲೇ ದಾರಿ ಬಿಟ್ಟವನು ಇನ್ನೊಬ್ಬನನ್ನು ಜಯಿಸಿದಂತಾಗುವುದು". ಎಂದನು. ಕೂಡಲೇ ಸುಹೋತ್ರನು ಶಿಬಿಯೇ ಅತ್ಯಂತ ಸಾಧುವೆಂದು ಭಾವಿಸಿ, ಅವನನ್ನು ಗೌರವಿಸಿ, ನಮಿಸಿ, ದಾರಿಬಿಟ್ಟು ಹೊರಟನು.

1. ಉಶೀನರ ದೇಶದ ರಾಜನಾರು?
2. ನಾರದನಿಗೆ ಸುಹೋತ್ರ ಮತ್ತು ಶಿಬಿ ಏನೆಂದು ಹೇಳಿದರು?
3. ದುಷ್ಟನನ್ನು ಹೇಗೆ ಗೆಲ್ಲಬೇಕು?
4. ನಾರದರು ಇಬ್ಬರ ನಡುವಿನ ಗೊಂದಲವನ್ನು ಪರಿಹರಿಸಿದ ಪ್ರಸಂಗವನ್ನು ಬರೆಯಿರಿ.

**೩. ಕೆಳಗಿನ ಪದ್ಯಭಾಗವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರ
ಶತಮಾನಗಳು ಜರಿಯ ಜಡಶಿಲೆಯ ಪೂಜಿಸಾಯ್ತು
ಪಾವ್ಗಳಿಗೆ ಪಾಲೆರೆದು ಪೋಷಿಸಾಯ್ತು
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೆ ದಾಸ್ಯವಾಯ್ತು

ಗುಡಿಯೊಳಗೆ ಕಣ್ಮುಚ್ಚಿ ಬೆಚ್ಚಗಿರುವರನೆಲ್ಲ
ಭಕ್ತ ರಕ್ತವಹೀರಿ ಕೊಬ್ಬಿಹರನೆಲ್ಲ
ಗಂಟೆ ಜಾಗಟೆಗಳಿಂ ಬಡಿದು ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು.

ನಿದ್ದೆಮಾಡುತಿಹರು ಹಲವು ದೇವತೆಗಳೆಲ್ಲ;
ಬಿದ್ದವರು ಕಲ್ಲಾಗಿ ಕೆಲವರಿಹರು;
ಕ್ಲಿಬತನದಲ್ಲಿ ಮರೆತೂ ನಮ್ಮ ಪೌರುಷವನೆಲ್ಲ
ಸತ್ತೆ ಹೋದಂತಿಹರು ಮತ್ತಳಿದಮರರು
(- ಕುವೆಂಪು)

ಪ್ರಶ್ನೆಗಳು:

೧. ನಾವು ಯಾರಿಗೆ ಹಾಲೆರೆದು ಪೋಷಿಸಿದ್ದೇವೆ ?
೨. ಯಾರು ನಿದ್ದೆ ಮಾಡುತಿಹರು ಮತ್ತು ಏಕೆ ವಿವರಿಸಿ?
೩. ಇಂದು ನಾವು ಯಾರನ್ನು ಪೂಜಿಸಬೇಕಾಗಿದೆ?
೪. ಶತ ಶತಮಾನಗಳ ವಿಚಾರ ಕುರಿತು ಕವಿಯ ಅಭಿಪ್ರಾಯ ವಿವರಿಸಿ.

**ಪ್ರಶ್ನೆ ೪. ಕೆಳಗಿನ ಪಡೆನುಡಿಗಳನ್ನು ಅರ್ಥೈಸಿ ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿರಿ.**

| | | | |
|---|---|---|---|
| ೧. ಕೆಂಡಕಾರು | ೨. ಕಾಲು ಕೆದರು | ೩. ಬಾಯಿಬಿಡು | ೪. ಮೂಲೆ ಗುಂಪಾಗು |
| ೫. ನಾಲಿಗೆ ಹರಿಬಿಡು | ೬. ಹೆಗಲು ಕೊಡು | ೭. ಕಾಲಿಗೆ ಬುದ್ಧಿ ಹೇಳು | ೮. ಓಡಿಹೋಗು |
| ೯. ತಲೆತಗ್ಗಿಸು | ೧೦. ಬೆನ್ನು ಬೀಳು | ೧೧. ದಂಗುಬಡಿ | ೧೨. ಮನಗಾಣು |
| ೧೩. ಅಚ್ಚಳಿ | ೧೪. ದುರಸ್ತಿ | ೧೫. ಘನತರ | ೧೬. ನಿಟ್ಟಿಸಿ |
| ೧೭. ಮೂಲೆಗೊತ್ತು | ೧೮. ದಿಕ್ಕುತಪ್ಪು | ೧೯. ವಶೀಲಿ | ೨೦. ಕಕ್ಕಾಬಿಕ್ಕಿ |
| ೨೧. ಪ್ರಯತ್ನಿಸು | ೨೨. ಘಾಸಿಗೊಳಿಸು | | |

**ಪ್ರಶ್ನೆ ೫. ಕೆಳಗಿನವುಗಳಿಗೆ ತತ್ಸಮ–ತದ್ಭವ ಬರೆಯಿರಿ.**

| | | | | | | |
|---|---|---|---|---|---|---|
| **ಕೋಗಿಲೆ** | **ಸಾವಂತ** | **ಶ್ರೀ** | **ಯಶ** | **ಗರ** | **ತಡಿ** | **ಚಂದ್ರ** |
| **ಪಟ್ಟಣ** | **ಬಿನ್ನಾಣ** | **ವ್ಯಯ** | **ಭಕ್ತ** | **ವೀರ** | **ಮೊಗಸಾಲೆ** | **ಕೋಗಿಲೆ** |
| **ದಾತೃ** | **ದೆಸೆ** | **ಕಾರ್ಯ** | **ದಿಟ್ಟಿ** | **ರಾಯ** | **ವಂಶ** | **ವ್ಯಾಪಾರಿ** |
| **ಸ್ಥಾನ** | **ಸಂದೇಹ** | **ಹಕ್ಕಿ** | **ಅಮೃತ** | **ದೀವಿಗೆ** | **ಪುಣ್ಯ** | **ಕಣೆ** |
| **ವಂಶ** | **ಸ್ಥಾನ** | **ಅಜ್ಜ** | **ಕಜ್ಜ** | | | |

**ಪ್ರಶ್ನೆ ೬. ನಿಮ್ಮ ನಗರದ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಪುರಸಭೆ/ಗ್ರಾಮ/ಪಂಚಾಯತ ಮುಖ್ಯಾಧಿಕಾರಿಗಳಿಗೆ ಪತ್ರ ಬರೆಯಿರಿ.**

**ಪ್ರಶ್ನೆ. ೭ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**

| | | | |
|---|---|---|---|
| ಕಲೋಪಾಸಕ | ಜಿನಾಲಯ | ನಿಂತಿರ್ದನು | ಸಕಳಾಚಾರ್ಯ |
| ಚಂದ್ರಾರ್ಕ | ಕಾದಾಟದಾಟ | ಭೇದವಿಲ್ಲ | ಶ್ರೀಮನ್ಮಹಾ |
| ಆದನೆಂಬ | ಕೈವಿಡಿದು | ವೃದ್ಧಿಯಾಗಿ | ಚರಿಸುತದ್ವರದ |
| ನೆತರೊಂದೆ | ಭೇದವಾಗಿ | ನಿಜಾಶ್ರಮ | ಶವವಾದವು |
| ಕಾಣಲಾಗದು | ಲೇಖನವನೋದಿ | ಜೀವತೆತ್ತವರು | ತೆಗೆದುತ್ತರೀಯಮಂ |
| ಬೇಡಬೇಡರಸುಗಳ | ಊರೂರು | ಬಲ್ಲೆನೆಂದು | ಮೈದೋರು |
| ವಧೂಪೇಪ | ಕಡುವೆಳ್ಪು | ಬೆಂಬತ್ತು | ಮೆಲ್ವಾತು |
| ಮನ್ವಂತರ | ವಲ್ಕಲಾವೃತ | ದ್ರವ್ಯಾರ್ಥಿ | ಕಳ್ಗುಡಿ |
| ನಿಮ್ಮರಸ | ಮದೋನ್ನತ | | |

**ಪ್ರಶ್ನೆ. ೮ ಕೆಳಗಿನ ಪದಗಳನ್ನು ಬಿಡಿಸಿ, ಸಮಾಸ ಹೆಸರಿಸಿ.**

| | | | |
|---|---|---|---|
| ಅತಿಕುಟಿಲ | ಬಿಲ್ದಿರುವನೇರಿಸಿ | ಕಟ್ಟೇಕಾಂತ | ತೆರೆದಿಕ್ಕುವ |
| ಕೈಕೊಳ್ಳುವುದು | ಇರುಳಳಿದು | ಸ್ವಾಮಿದ್ರೋಹ | ಹೊಸಗಾಲ |

| | | | |
|---|---|---|---|
| ಪರಧನ | ಮುಂಗೈ | ಧನಹರಣ | ನಡುರಾತ್ರಿ |
| ಸಾಕ್ಷಿಮಾಪಿ | ಹನುಮಭಿಮರಾಮ | ಸೂರ್ಯಚಂದ್ರರು | ಮೋಸಮಾಡು |
| ಇನತನೂಜ | ಮೇದಿನೀಪತಿ | ದನುಜರಿಪು | ಕೈಯಾನು |
| ರಾಜೀವಸಖ | ಹೊಗೆದೋರು | ಬಿಲ್ಗೊಂಡು | ನಲ್ಗುದುರೆ |
| ಬಲವಂದು | ಪೂದೋಟ | ಪೆರ್ಮಗ | ಘಟಸಂಭೂತ |
| ಗಾಂಡಿವಿ | ಪವನನಂದನ | ಮಧಾಂದ | ಪೆರ್ಮರ |
| ನಟ್ಟಡವಿ | ಮುರಾರಿ ಮಾದ್ರಮಾಗಧಯಾದವರು | | ಸೊಲ್ಗೇಳಿ |
| ಪಾರ್ಥಭೀಮರು | ಅಂತಕಾತ್ಮಜ | ದಿನಪಸುತ | ನಾಣಿಲಿ |
| ದಿವ್ಯಶರಾವಳಿ | ಮಹೀಪತಿ | ಕಳ್ಗುಡಿದ | |

**ಪ್ರಶ್ನೆ. ೯ ಕೆಳಗಿನ ಗಾದೆಮಾತುಗಳನ್ನು ನಿಮ್ಮ ವಾಕ್ಯಗಳಲ್ಲಿ ಬರೆಯಿರಿ.**

೧. ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತೆ.
೨. ಮಂಗ ಮೊಸರು ತಿಂದು ಮೇಕೆ ಬಾಯಿಗೆ ಸವರಿದಂತಾಯ್ತು.
೩. ಮಾಡೋದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ.
೪. ಊರಿಗೆ ದೊರೆಯಾದರೂ ತಾಯಿಗೆ ಮಗನೆ.
೫. ಹುಚ್ಚರ ಮದುವೇಲಿ ಉಂಡೋನೆ ಜಾಣ.
೬. ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ ಹಾಕಿದರಂತೆ.
೭. ಒಕ್ಕಲಿಗ ಒಕ್ಕದಿದ್ದರೆ, ಬಿಕ್ಕುವುದು ಜಗವೆಲ್ಲ.
೮. ಮಾತು ಬೆಳ್ಳಿ ಮೌನ ಬಂಗಾರ.
೯. ಕೂಡಿಬಾಳಿದರೆ ಸ್ವರ್ಗ ಸುಖ
೧೦. ಮತೇ ಮುತ್ತು ಮಾತೇ ಮೃತ್ಯು
೧೧. ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.
೧೨. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ
೧೩. ಆಳಾಗಬಲ್ಲವನು; ಅರಸಾಗಬಲ್ಲನು.

**ಪ್ರಶ್ನೆ. ೧೦ ಕೆಳಗೆ ಕೊಟ್ಟಿರುವ ಕವಿಗಳ ಪರಿಚಯವನ್ನು ಮಾಡಿಕೊಡಿ.**

| | | | |
|---|---|---|---|
| ವಿ ಸಿ ಸಿತಾರಾಮಯ್ಯ | ದ.ರಾ.ಬೇಂದ್ರೆ | ಪಂಪ | ವಿ.ಕೃ.ಗೋಕಾಕ |
| ಜಿ.ಎಸ್.ಶಿವರುದ್ರಪ್ಪ | ಕುಮಾರವ್ಯಾಸ | ದೇವನೂರ ಮಹಾದೇವ | ಎ.ಎನ್. ಮೂರ್ತಿರಾಯ |
| ಕುಮಾರವಾಲ್ಮೀಕಿ | | | |

**ಪ್ರಶ್ನೆ. ೧೧ ಕೆಳಗಿನ ವಿಷಯಗಳಿಗೆ ೧೫೦ ಪದಗಳಿಗೆ ಮೀರುವಂತೆ ಪ್ರಬಂಧ ಬರೆಯಿರಿ.**

೧. ರಾಷ್ಟ್ರೀಯ ಹಬ್ಬಗಳ ಮಹತ್ವ ೨. ಗ್ರಂಥಾಲಯಗಳ ಮಹತ್ವ ೩. ಸಾಮಾಜಿಕ ಪಿಡುಗುಗಳು
೪. ಗ್ರಾಮಸ್ವರಾಜ್ಯ ೫. ತ್ಯಾಜ್ಯವಸ್ತು ನಿರ್ವಹಣೆ ೬. ಮಹಿಳಾ ಸಬಲೀಕರಣ
೭. ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯಗಳ ಸಾಮಾಜಿಕ ಮಹತ್ವ.

**ಪ್ರಶ್ನೆ. ೧೨ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

೧. ನಿಮ್ಮ ಊರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಅನುಮತಿ ಕೋರಿ ಜಿಲ್ಲಾವೈದ್ಯಾಧಿಕಾರಿಗೆ ಪತ್ರ ಬರೆಯಿರಿ.

೨. ನಿಮ್ಮ ಶಾಲೆಯಲ್ಲಿ ನಡೆದ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮ ಕುರಿತು ಪತ್ರಿಕಾ ವರದಿ ತಯಾರಿಸಿ.

೩. ನಿಮ್ಮ ನಗರದ ಬೀದಿ ದೀಪದ ಸಮಸ್ಯೆ ಬಗೆಹರಿಸಲು ಪುರಸಭೆಗೆ ಒಂದು ಪತ್ರ ಬರೆಯಿರಿ.